# ಕನ್ನಡವೆಂಬ ಕನ್ನಡಿಯಲ್ಲಿ

**ತೇಜಶ್ರೀ ಹಾಸನ**

**ಅಂತರಂಗದ** ಇಂದ್ರಿಯವ ಮುಟ್ಟಿಮುಟ್ಟಿ ಚಿಟ್ಟೆಬೆರಳುಗಳಲ್ಲಿ
ಪುಳಕಗೊಳ್ಳುತ್ತ ಪ್ರಾರ್ಥಿಸುತ್ತಿತ್ತು ಕವಿತೆ:

ನೋಡಲೆಂದು ಕಣ್ಣುಕೊಟ್ಟು
ಕೇಳಲಿಕ್ಕೆ ಕಿವಿಯನಿಟ್ಟು
ಸ್ಪರ್ಶಸುಖಕ್ಕಿದೋ ಚರ್ಮವನಂಟಿಸಿ
ಆಘ್ರಾಣಿಸುವುದ ಮೂಗಿಗೊಗ್ಗಿಸಿ
ಚಂಚಲ ಚಪಲಕ್ಕೆ ನಾಲಿಗೆಯ ಮಾಡಿ
ಅದರ ಪಕ್ಕಗೆ ಮಾತಿನ ಜೀವರಕ್ಕೆಯ ಬೆಸುಗೆ ಹಾಕಿದ ತಾಯಿಯೇ,
ಕಲಿಸು ಬಾ ಹೊಸದಾಗಿ ಅಕ್ಷರಮಾಲೆಯನ್ನು,
ಹೊಸವಿನ್ಯಾಸದಲಿ ಪದಗಳ ಕಟ್ಟುವ ಆಟವನ್ನು,
ಕನ್ನಡದೊಳಗೇ ಅಡಗಿರುವ ಕನ್ನಡಿಯಲ್ಲಿ
ಒಳಗನ್ನೇ ಬಗೆವ ಬಗೆಯನ್ನು,
ಆ ಬಗೆಯಲ್ಲೇ ನಾಡು ಉಳಿವ ಪರಿಯನ್ನು;
ಕಲಿಸು ತಾಯಿ, ಅಂತರಾಳದ ಹಣತೆಯಲ್ಲಿ
ಕನ್ನಡವು ತನ್ನನ್ನೇ ತಾನು ನೋಡಿಕೊಳ್ಳುತ್ತಲಿರುವಾಗ
ಚಿಟ್ಟೆಯಂತೆ ಬಳಿಸಾರುವ ಪದಗಳೆಲ್ಲ
ಬೆಂಕಿಯ ಹೂದೋಟದಲ್ಲಿ ಹೊಸಜೀವ ಪಡೆದು ಕವಿತೆಯಾಗುವ ಹದವನ್ನು.

---

ತನ್ನನ್ನು ತಾನು ಅಭಿವ್ಯಕ್ತಿಗೊಳಿಸಿಕೊಳ್ಳುವ ತಹತಹವು ಪ್ರತಿಯೊಂದು ಭಾಷೆಗೂ ಸದಾಕಾಲ ಇರುತ್ತದೆ ಎನ್ನುವುದು ನನಗೆ ವೇದ್ಯವಾಗುವುದು ಹಲವಾರು ಸಣ್ಣಪುಟ್ಟ ಘಟನೆಗಳಿಂದ: ಇರುವೆಯನ್ನು ನೋಡುತ್ತ ತನ್ನಷ್ಟಕ್ಕೇ ಮಾತನಾಡುವ ಮಗು; ಹರವಿರುವ ಅಕ್ಕಿಯನ್ನು ತಿನ್ನಲು ಬರುವ ಕೋಳಿಯನ್ನು ಓಡಿಸುತ್ತ ಮಾತನಾಡಿಕೊಳ್ಳುವ ಅಜ್ಜಿ; ನಾಯಿಯ ಜೊತೆ ಮಾತಿಗಿಳಿಯುವ ಗೆಳತಿ ಇತ್ಯಾದಿ. ಭಾಷೆಯ ಭಾವಕೋಶ ಹಿಗ್ಗುವುದೇ ಇಂತಹ ಬಿಡುವಿನ, ಸಾವಕಾಶದ ಮಾತುಕತೆಯಲ್ಲಿ. ನನಗನ್ನಿಸಿದ್ದನ್ನು ಹೇಳಿ ಬಿಡಬೇಕು ಎನ್ನುವ ತವಕ ನನ್ನದೆಷ್ಟಿರುತ್ತದೆಯೋ, ಹಾಗನ್ನಿಸಿದ್ದನ್ನು ತಾನು ತನ್ನ ಬಗೆಯಲ್ಲಿ ಹೇಳಬೇಕೆನ್ನುವ ತವಕದೊಳಗೆ ಭಾಷೆಯ ಜೀವಕೋಶವೂ ಹಿಗ್ಗುತ್ತಿರುತ್ತದೆ. ಹಾಗಾಗಿಯೇ ಭಾಷೆಯು ನನಗೆ ಅಂತರಂಗದ ಇಂದ್ರಿಯ; ನನ್ನೊಳಗು ತೋರ್ಪಡುವುದೇ ನಾನು ಬಳಸುವ ಭಾಷೆಯ

**ನಾಡಗೀತೆ ಆತ್ಮಗೌರವದ ಪ್ರತೀಕ**